# ಹೂ ಮನೆ!







ಇದು 26 ವರ್ಷಗಳ ತಪಸ್ಸಿನ ಫಲ. ಹೂ–ಮನೆಯೊಂದು ಅರಳಿ ನಿಂತಿದೆ. ಅನ್ನೆ ಮತ್ತು ರಾಬಿನ್ ಸ್ಟ್ರೇಂಜ್ ದಂಪತಿಗಳ ನಿರಂತರ ನಿಗಾದಿಂದ ನಳನಳಿಸುತ್ತಿದೆ. ಪ್ರತಿ ವರ್ಷ ನೂರಾರು ಪೌಂಡ್‌ಗಳನ್ನು ಇದಕ್ಕಾಗಿಯೇ ಅವರು ಖರ್ಚು ಮಾಡಿದ್ದಾರೆ. ಎಲ್ಲೆಲ್ಲಿಂದಲೋ ಸಸಿ, ಕಂಟಿ, ಬೀಜಗಳನ್ನು ತಂದು ಮನೆಯಂಗಳದಲ್ಲಿ ನೆಟ್ಟಿದ್ದಾರೆ. ಮುತುವರ್ಜಿಯಿಂದ ನೀರು ಗೊಬ್ಬರ ಹಾಕಿ ಬೆಳೆಸಿದ್ದಾರೆ. ಪ್ರತಿ ದಿನ ಕೆಲವು ಗಂಟೆಗಳನ್ನು ಈ ಹೂ–ಮನೆಯ ಉಸ್ತುವಾರಿಗಾಗಿ ಮೀಸಲಿಟ್ಟಿದ್ದಾರೆ. ಈ ಮೀಸಲು ಸಮಯ ಅವರಿಗೆ ಅತ್ಯಂತ ಆನಂದವನ್ನು ನೀಡುವ ಸುಖ–ಸಮಯ!

ಈಗ ಈ ವೈವಿಧ್ಯಮಯ ಹೂವುಗಳನ್ನು ಹೊದ್ದ ಗಿಡ–ಕಂಟಿ–ಬಳ್ಳಿಗಳು, ಮನೆಯನ್ನೇ ಮರೆ ಮಾಡುವಷ್ಟು ಬೆಳೆದು ನಿಂತಿವೆ. ಎಲ್ಲದಕ್ಕೂ ಕೈಯಾರೆ ನೀರುಣಿಸುವುದು ಈಗ ಈ ದಂಪತಿಗೆ ಸಾಧ್ಯವಿಲ್ಲ. ಸ್ವಯಂಚಾಲಿತ ನೀರುಣಿಸುವ ಯಂತ್ರಗಳನ್ನು ಅವರು ಬೆಳೆಸುತ್ತಿದ್ದಾರೆ. ಏನೇ ಆದರೂ ಹೂ–ಮರಗಳ ಸಾಮೀಪ್ಯದಿಂದ ದೂರವಾಗಲೂ ಅವರಿಗೆ ಸಾಧ್ಯವೇ ಇಲ್ಲ.

ಒಮ್ಮೆ ಈ ದಂಪತಿ ಅಮೆರಿಕಾ ದೇಶದ ನ್ಯೂಯಾರ್ಕ್ ಪಟ್ಟಣದ ಪ್ರವಾಸಕ್ಕೆ ಹೋಗಿದ್ದರಂತೆ. ಅಲ್ಲಿ ಮನೆ ಮುಂದೆ ತೂಗು ಹಾಕಿದ ಹೂ–ಬಳ್ಳಿಯ ಸುಂದರ ಕುಂಡವೊಂದನ್ನು ನೋಡಿದರಂತೆ. ತಾವೂ ಏಕೆ ಇಂಥ ಕುಂಡಗಳನ್ನು ಮನೆಯಲ್ಲಿ ಇಟ್ಟು ಬೆಳೆಸಬಾರದು ಎಂದೆನಿಸಿತಂತೆ. ಅದೇ ಈ ಬೃಹತ್ ಹೂ–ಮನೆಯ ಸೃಷ್ಟಿಗೆ ಕಾರಣವಾಯಿತು.

ಈ ಹೂ–ಮನೆ ಇರುವುದು ಇಂಗ್ಲೆಂಡ್ ದೇಶದ ಉತ್ತರ ಯಾರ್ಕಶೈರ್‌ದಲ್ಲಿ. ಮುಖ್ಯ ರಸ್ತೆಯೊಂದರ ಬದಿ ಇರುವ ಈ ಮನೆಯನ್ನು, ಆ ದಾರಿಯಲ್ಲಿ ಹೋಗುವವರೆಲ್ಲ ಕೆಲ ಸಮಯ ನಿಂತು ನೋಡಿಯೇ ಹೋಗುವುದು. ಅದರ ಸೌಂದರ್ಯವೇ ಅಂತಹುದು. 26 ವರ್ಷಗಳ ನಂತರವೂ, ಈ ಸ್ಟ್ರೇಂಜ್ ದಂಪತಿಗಳ ಹೂ–ಮನೆಯ ಆಕರ್ಷಣೆ ಇನ್ನೂ ತಣಿದಿಲ್ಲವಂತೆ. ಅವರ ಹೆಸರೇ ಸ್ಟ್ರೇಂಜ್; ಹಾಗೇ ಅವರ ಹೂವಿನ ಬಗೆಯ ಆಕರ್ಷಣೆಯೂ ಕೂಡ!

■ ಸುಭಾಸ ಯಾದವಾಡ